Smuggling of Foodgrains in Border Areas of the State

160. Sri B. M. IDINABBA (Mangalore).—

Will the Minister for State of Food and Civil Supplies be pleased to state :—

(*a*) whether Government is aware that regular smuggling of foodgrains is going on in border areas of the State ;

(*b*) whether Government is aware that Police force has remained silent without taking any action ;

(*c*) the strict measures that the Government has taken to prevent smuggling of foodgrains ?

Sri B. VITHALDAS SHETTY (Minister of State for Food and Civil Supplies).—

(*a*) Government is aware that smuggling of foodgrains is going on in the border areas but this is neither regular nor on a large scale.

(*b*) No, all possible precautions are taken by the Police Force.

(*c*) Check Posts have been established all along the borders of Mysore State to check movement of foodgrains. Mobile Squads have been established for patrolling in the border Districts. Mechanised boats have been provided of the police for patrolling by sea and river to prevent smuggling of foodgrains by country craft. A special cell in the Police Department under a Superintendent of Police with 4 Regional Centres at Mangalore, Gulbarga, Belgaum and Bangalore, each under a Deputy Superintendent of Police has been established to devote exclusive attention to the detection of food offences including smuggling of foodgrains.

ಶ್ರೀ ಬಿ. ಎಂ. ಇದಿನಬ್ಬ.—ಮೆಕೆನ್ಸೈಜ್ಡ್ ದೋಣಿಗಳನ್ನು ಪೋಲೀಸರಿಗೆ ಒದಗಿಸಿದ್ದರೂ ಅವು ದಿನವಹಿ ಹಾಳಾಗುವುದರಿಂದ ಪೋಲೀಸರು ಹೋಗಿ ನೋಡಲು ಅವಕಾಶವಿಲ್ಲದೆ ಕಳ್ಳಸಾಗಾಣಿಕೆಗೆ ಅವಕಾಶವಾಗಿರುವುದು ಗಮನಕ್ಕೆ ಬಂದಿದೆಯೇ ?

† ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಮೆಕೆನ್ಸೈಜ್ಡ್ ಬೋಟ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುವುದು ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಒಂದು ವರ್ಷಕ್ಕೆ ಮೊದಲೇ ಈ ಪ್ರಶ್ನೆಗಳನ್ನು ಕೇಳಿದ್ದಾರೆ. ಈಗ ಸೂಕ್ತ ಕ್ರಮ ತೆಗೆದುಕೊಂಡಮೇಲೆ ಕಳ್ಳ ಸಾಗಾಣಿಕೆ ಕಡಮೆಯಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ವ್ಯವಸ್ಥಿತ ರೀತಿಯಲ್ಲಿ ಕಳ್ಳಸಾಗಾಣಿಕೆ ನಡೆಯುತ್ತಿಲ್ಲವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದು ಕಳ್ಳ ಸಾಗಾಣಿಕೆಯಾಗದೆ ಖಾದಿಧಾರಿಗಳ ಸಾಗಾಣಿಕೆಯಾಗಿರುವುದರಿಂದ ತಡೆಗಟ್ಟುವುದಕ್ಕೆ ಕಷ್ಟವಾಗಿದೆಯಲ್ಲವೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ವೇಶದಲ್ಲಿ ಖಾದಿ ಹಾಕಿಕೊಳ್ಳತಕ್ಕವರ ಸಂಖ್ಯೆ ಹೆಚ್ಚಾಗಿರುವುದರಿಂದ ಮತ್ತು ಶ್ರೀ ಭಾಸ್ಕರಶೆಟ್ಟರೂ ಖಾದಿ ಹಾಕುವುದರಿಂದ ಬಹಳ ಕಷ್ಟವಾಗಿದೆ.